# ಬಹುಮುಖಿ ಜೊಹೊ ಎಐ ವಾಣಿ




■ ಶಶಿಕುಮಾರ್ ಸಿ.

**ವಾಟ್ಸ್‌ಆ್ಯಪ್‌ಗೆ ಪರ್ಯಾಯವಾಗಿ ಅರಟ್ಟೈ ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಜೊಹೊ ಕಂಪನಿಯು ಎಐ ಆಧರಿತ ವರ್ಕ್‌ಸ್ಪೇಸ್ ಆ್ಯಪ್ ಪರಿಚಯಿಸಿದ್ದು, ಇದನ್ನು ಬಹುಮುಖಿಯಾಗಿ ಬಳಸಬಹುದಾಗಿದೆ.**

ಆನ್‌ಲೈನ್ ವೇದಿಕೆಯೊಂದರಲ್ಲಿ ತಂಡದೊಂದಿಗೆ ಕೂಡಿ ಹೊಸತನದ, ಸ್ಮಾರ್ಟ್ ಯೋಜನೆಗಳನ್ನು ರೂಪಿಸಬೇಕೆ? ಕೆಲಸದ ನಡುನಡುವೆ ವಿಡಿಯೊ ಮೀಟಿಂಗ್‌ನಂತಹ ಕಾರ್ಯಗಳನ್ನು ಮಾಡಬೇಕೆ? ಹೊಸ ಐಡಿಯಾಗಳನ್ನು ಹುಟ್ಟುಹಾಕಲು ರೆಡಿಮೇಡ್ ಟೆಂಪ್ಲೇಟ್‌ಗಳು ಕ್ಷಣಾರ್ಧದಲ್ಲಿ ನಿಮ್ಮ ಕಣ್ಮುಂದಿರಬೇಕೆ? ಮಲ್ಟಿಟಾಸ್ಕಿಂಗ್ ಅನುಕೂಲಕ್ಕಾಗಿ ಒಂದೇ ವೇದಿಕೆಯಲ್ಲಿ ಎಲ್ಲ ರೀತಿಯ ವೆಬ್‌ಸೈಟ್‌ಗಳೊಂದಿಗೆ ಸಂಪರ್ಕ ಸಾಧಿಸಬೇಕೆ? ಹಾಗಿದ್ದರೆ ತಡವೇಕೆ, ಜೊಹೊ ಕಂಪನಿಯ ಎಐ ಆಧರಿತ 'ವಾಣಿ'ಯನ್ನು ಸಂಪರ್ಕಿಸಿ, ಪಟಾಪಟ್ ಕೆಲಸಗಳನ್ನು ಮುಗಿಸಿ.

ವಾಣಿ, ಮಲ್ಟಿಟಾಸ್ಕಿಂಗ್ ಕೆಲಸಗಳನ್ನು ಏಕಕಾಲದಲ್ಲಿ ಒಂದೇ ವೇದಿಕೆಯಡಿ ಮಾಡಲು ಅವಕಾಶ ಕಲ್ಪಿಸುವ ಆನ್‌ಲೈನ್ ಪ್ಲಾಟ್‌ಫಾರ್ಮ್. ಆ್ಯಪ್ ಹಾಗೂ ವೆಬ್‌ಸೈಟ್ ಮಾದರಿಯಲ್ಲೂ ಲಭ್ಯ. ಸಾಫ್ಟ್‌ವೇರ್, ಮಾರ್ಕೆಟಿಂಗ್, ಪ್ರಾಡೆಕ್ಟ್, ವಿನ್ಯಾಸ, ಸೇಲ್ಸ್ ಸೇರಿದಂತೆ ಇನ್ನೂ ಹಲವು ಕೆಲಸಗಳನ್ನು ಮಾಡುವವರಿಗೆ ಬಹು ಸಹಾಯಕ ದೇಸೀ ವೇದಿಕೆ.

ಪ್ರೊಡಕ್ಟಿವಿಟಿ ಸೇರಿದಂತೆ ಹಲವು ಕಾರ್ಯಗಳನ್ನು ಒಂದೇ ಸಮಯದಲ್ಲಿ, ಒಂದೇ ವೇದಿಕೆಯಲ್ಲಿ ಮಾಡಲು ಇಷ್ಟು ದಿನ ಉದ್ಯೋಗಿಗಳು 'ಗೂಗಲ್ ವರ್ಕ್‌ಸ್ಪೇಸ್' ಹಾಗೂ 'ಮೈಕ್ರೊಸಾಫ್ಟ್ 365'ಗೆ ಆ್ಯಪ್, ವೆಬ್‌ಸೈಟ್‌ಗಳನ್ನು ಬಳಸುತ್ತಿದ್ದರು. ಇದಕ್ಕೆ ಪರ್ಯಾಯವಾಗಿ ಈಗ 'ವಾಣಿ' ರೂಪುಗೊಳ್ಳುವ ನಿರೀಕ್ಷೆ ಹುಟ್ಟಿಸಿದೆ. ಭಾರತೀಯ ಸಾಫ್ಟ್‌ವೇರ್ ಕಂಪನಿ ಮತ್ತು ತಮಿಳುನಾಡು ಮೂಲದ ಜೊಹೊ 'ವಾಣಿ' ಪೈಪೋಟಿ ನೀಡಲು ಅಣಿಯಾಗಿದೆ.

## ಏನಿದು ಜೊಹೊ ವಾಣಿ?

'ವಾಣಿ' ಎಂಬುದು ತಂಡದ ಸಹಯೋಗಕ್ಕಾಗಿ ವಿನ್ಯಾಸಗೊಳಿಸಿದ ಬುದ್ಧಿವಂತ, ದೃಶ್ಯ ಸಂಯೋಜಿತ ವೇದಿಕೆ. ಚಾಟ್ ಅಥವಾ ಡಾಕ್ಯುಮೆಂಟ್‌ಗೆ ಸೀಮಿತವಾಗದ ಇದು, ನಮ್ಮ ಕಲ್ಪನೆಗಳನ್ನು ದೃಶ್ಯಾತ್ಮಕವಾಗಿ ಮೂಡಿಸುವ, ಒಟ್ಟಾಗಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಆನ್‌ಲೈನ್ ಸಹಾಯಕ.

ಚಾಟ್ ಅಥವಾ ಡಾಕ್ಯುಮೆಂಟ್ ಹಂಚಿಕೆಗೆ ಒತ್ತು ನೀಡುವ ಸಾಂಪ್ರದಾಯಿಕ ಅಪ್ಲಿಕೇಶನ್‌ಗಳಿಗಿಂತ ಭಿನ್ನವಾಗಿರುವ 'ವಾಣಿ', ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದ ಚಿಂತನೆಯನ್ನು ನಾನಾ ರೂಪದಲ್ಲಿ ದೃಶ್ಯಕ್ಕಿಳಿಸಲು ಸಹಾಯಕ. ಡಿಜಿಟಲ್ ಕ್ಯಾನ್ವಾಸ್‌ನಂತಿರುವ ಇದನ್ನು ಬಳಸಿಕೊಂಡು ಉದ್ಯೋಗಿಗಳ ತಂಡ, ಯೋಜನೆಯನ್ನು ಸೃಜನಾತ್ಮಕವಾಗಿ ರೂಪಿಸಬಹುದು. ಪರಿಕಲ್ಪನೆಗಳನ್ನು ಮ್ಯಾಪ್ ಮಾಡಬಹುದು, ವರ್ಕ್‌ಫ್ಲೋಗಳನ್ನು ಸ್ಕೆಚ್ ಮಾಡಬಹುದು.

ಹೈಬ್ರಿಡ್ ಮತ್ತು ರಿಮೋಟ್ ತಂಡಗಳಿಗಾಗಿ ನಿರ್ಮಿಸಲಾದ ಈ ವೇದಿಕೆ ಬಳಕೆದಾರರಿಗೆ ರೇಖಾಚಿತ್ರಗಳು, ಮೈಂಡ್ ಮ್ಯಾಪ್‌ಗಳು, ಸ್ಟಿಕಿ ನೋಟ್‌ಗಳು ಮತ್ತು ದೃಶ್ಯ ಚೌಕಟ್ಟುಗಳ ಮೂಲಕ ಆಲೋಚನೆಗಳನ್ನೂ ವ್ಯಕ್ತಪಡಿಸಲು ಸಹಕರಿಸುತ್ತದೆ. ನೈಜ ಸಮಯದಲ್ಲಿ ವಿಡಿಯೊ ಕರೆಗಳು, ಸಂದರ್ಭೋಚಿತ ಕಾಮೆಂಟ್‌ಗಳನ್ನು ಮಾಡಲು ಮತ್ತು ಸಂವಹನ ನಡೆಸಲು ಬಳಸಬಹುದು.

ರೇಖಾಚಿತ್ರಗಳು, ಮೈಂಡ್ ಮ್ಯಾಪ್‌ಗಳು, ವರ್ಕ್‌ಫ್ಲೋಗಳು ಅಥವಾ ರೇಖಾಚಿತ್ರಗಳನ್ನು ರಚಿಸಬಹುದಾದ ಅನಂತ ಡಿಜಿಟಲ್ ವೈಟ್‌ಬೋರ್ಡ್ ಸವಲತ್ತು ಇಲ್ಲಿದೆ. ಇದರ ನಿರ್ವಹಣೆ ಗೊತ್ತಿಲ್ಲದಿದ್ದರೆ, ಧ್ವನಿ ಕಮಾಂಡ್ ನೆರವಿನಿಂದ 'ವಾಣಿ ಎಐ' ಸಹಾಯ ಮಾಡಲಿದೆ.

ಕಾಮೆಂಟ್ ವಿಭಾಗಗಳು, ಧ್ವನಿ ಟಿಪ್ಪಣಿಗಳು ಮತ್ತು ಇಮೋಜಿ ಪ್ರತಿಕ್ರಿಯೆಗಳಂತಹ ಪ್ರಮುಖ ಫೀಚರ್‌ಗಳನ್ನು ತಂಡದ ಕೆಲಸಕ್ಕಾಗಿ 'ವಾಣಿ' ಒದಗಿಸುತ್ತದೆ. ನೀಡುವ ಮಾಹಿತಿ ಆಧಾರದ ಮೇಲೆ, ಫ್ಲೋಚಾರ್ಟ್‌ಗಳು ಮತ್ತು ಮೈಂಡ್ ಮ್ಯಾಪ್‌ಗಳಂತಹ ದೃಶ್ಯ ಅಂಶಗಳನ್ನು ಎಐ ಆಧರಿತವಾಗಿ ತಕ್ಷಣವೇ ರಚಿಸಬಹುದು. ವೈಟ್ ಬೋರ್ಡ್‌ನಲ್ಲಿನ ಚರ್ಚೆಗಳು, ಕಾಮೆಂಟ್‌ಗಳು ಅಥವಾ ಮಾಹಿತಿಯನ್ನು ತ್ವರಿತವಾಗಿ ವಿಶ್ಲೇಷಿಸಿ ಸಾರಾಂಶ ಒದಗಿಸುತ್ತದೆ.

ಬೇರೆ ಅಪ್ಲಿಕೇಶನ್‌ಗೆ ಶಿಫ್ಟ್ ಆಗದೆ, ವಾಣಿ ಕ್ಯಾನ್ವಾಸ್‌ನೊಳಗೇ ವಿಡಿಯೊ ಕರೆಗಳನ್ನು ಅಟೆಂಡ್ ಮಾಡಬಹುದು. 'ವಾಣಿ ಸ್ಪೇಸ್' ಒಂದು ದೊಡ್ಡ ಪ್ರಾಜೆಕ್ಟ್‌ನ ಫೋಲ್ಡರ್‌ನಂತಿದ್ದು, ಅದರಲ್ಲಿನ 'ಝೋನ್‌ಗಳು' ಆ ಸ್ಪೇಸ್‌ನಲ್ಲಿರುವ ಉಪ ಕ್ಯಾನ್ವಾಸ್‌ಗಳಂತೆ ಕಾರ್ಯನಿರ್ವಹಿಸುತ್ತವೆ. ತಂಡದ ವಿಭಿನ್ನ ಹಂತದ ಕೆಲಸಗಳನ್ನು ವಿಭಜಿಸಲು ಇವು ಸಹಾಯಕ.

ಕೆಲಸ ಕಾರ್ಯಗಳನ್ನು ನಿಯೋಜಿಸಲು, ಗಡುವುಗಳನ್ನು ನಿಗದಿಪಡಿಸಲು ಮತ್ತು ಕೆಲಸಗಳನ್ನು ಟ್ರ್ಯಾಕ್ ಮಾಡಲು ಡಾಟಾಬೇಸ್ ಕೋಷ್ಟಕಗಳು ಮತ್ತು ವರ್ಕ್‌ಫ್ಲೋ ಸಾಧನಗಳನ್ನು ಒಳಗೊಂಡಿರುವ ವಾಣಿಯಲ್ಲಿ, ನಿರ್ದಿಷ್ಟ ವಿನ್ಯಾಸ ಅಥವಾ ಕಲ್ಪನೆಯ ಆಧಾರದ ಮೇಲೆ ನೇರ ಪ್ರತಿಕ್ರಿಯೆ ನೀಡಬಹುದು. ■